# ಹೊಸತು




## ವಿಲಿಯಂ ಪೆನ್‌ನಿಂದ ಡೆಸ್ಕ್ ಆ್ಯಕ್ಸೆಸರೀಸ್

ಮನೆ ಮತ್ತು ಕಚೇರಿ ಬಳಕೆಗಾಗಿ ವಿಲಿಯಂ ಪೆನ್ ಇದೀಗ ಹೊಸ ಮಾದರಿಯ ಡೆಸ್ಕ್ ಆ್ಯಕ್ಸೆಸರೀಸ್ ಅನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಗಡಿಯಾರ, ಸ್ಟೀಲ್ ಡೈಸ್, ಪೆನ್ ಮುಂತಾದ ಉತ್ಪನ್ನಗಳಿವೆ.

ಡೆಲ್ವಿ ಗ್ರಾಂಡ್ ಸೆಡಾನ್ ಕ್ಲಾಕ್: ಇಂಗ್ಲೆಂಡ್‌ನ ಡೆಲ್ವಿ ಗ್ರಾಂಡ್ ಸೆಡಾನ್ ಕ್ಲಾಕ್ ವೃತ್ತಾಕಾರ ಮತ್ತು ಫ್ಲಾಟ್ ಪೆಂಡೆಂಟ್ ಆಕಾರಗಳಲ್ಲಿದೆ. ಇದನ್ನು ಅತ್ಯುತ್ತಮ ಸ್ಟೇನ್‌ಲೆಸ್ ಸ್ಟೀಲ್‌ನಿಂದ ತಯಾರಿಸಲಾಗಿದೆ. ಬೆಲೆ 15,100ರೂಪಾಯಿ

ಸ್ಟೈಲಿಷ್ ಟೈಮ್ ಮೆಷಿನ್ ಗಡಿಯಾರ 360 ಡಿಗ್ರಿ ತಿರುಗಿಸಬಲ್ಲ ಡಯಲ್ ಹೊಂದಿದೆ. ಹಿತ್ತಾಳೆ ದೇಹ ಹೊಂದಿರುವ ಈ ಟೈಮ್ ಮೆಷಿನ್ ಕಚೇರಿಯ ಮೇಜಿಗೆ ಪರಿಪೂರ್ಣವಾಗಿದೆ. ಬೆಲೆ 8,500ರೂ.

ಸ್ಟೀಲ್ ಡೈಸ್

ಡೆಲ್ವೀ ಸ್ಟೇನ್‌ಲೆಸ್ ಸ್ಟೀಲ್ ಡೈಸ್ ಪೇಪರ್‌ವೈಟ್, ಥಿಂಕಿಂಗ್ ಟೂಲ್, ಕ್ಯೂರಿಯೋ ಅಥವಾ ಡಿಸಿಷನ್ ಮೇಕರ್ ಆಗಿ ಬಳಸಬಹುದು. ಬೆಲೆ 4,700ರೂ.

ವಿವರಕ್ಕೆ: 9738406426/ 99728 75644




## ಫಾಸ್ಟ್ರಾಕ್ ಗ್ರೇಡಿಯಂಟ್ ಲೆನ್ಸ್ ಕನ್ನಡಕ

ಫಾಸ್ಟ್ರಾಕ್ ಇದೀಗ ಸ್ಟೈಲಿಷ್ ಆದ ಗ್ರೇಡಿಯಂಟ್ ಲೆನ್ಸ್ ಕನ್ನಡಕಗಳನ್ನು ಮಾರುಕಟ್ಟೆಗೆ ತಂದಿದೆ. ಉತ್ತಮ ಗುಣಮಟ್ಟದ ಪ್ಲಾಸ್ಟಿಕ್ ಬಳಸಿದ ಮತ್ತು ವಿವಿಧ ಬಣ್ಣಗಳ ಫ್ರೇಮ್ ಧರಿಸಿದರೆ ಉತ್ತಮ ಲುಕ್ ಕೊಡುತ್ತದೆ. ವಿಭಿನ್ನ ತ ಶೈಲಿಯ ಕ್ಯಾಟ್ ಐ ಕನ್ನಡಕಗಳು ಆಧುನಿಕ ಮನೋಭಾವದ ಯುವಕ ಯುವತಿಯರಿಗೆ ಸೂಕ್ತವಾಗಿದೆ ಎನ್ನುವುದು ಕಂಪೆನಿ ಮಾತು. ಗುಲಾಬಿ, ನೇರಳೆ, ಕೆಂಪು, ನೀಲಿ ಬಣ್ಣಗಳಲ್ಲಿ ಸಿಗುತ್ತದೆ.

ಎಲ್ಲ ಪ್ರಮುಖ ಕನ್ನಡಕ ಮಳಿಗೆಗಳಲ್ಲಿ ಸಿಗುತ್ತದೆ.




## ನಿವಿಯ ಬಾಡಿ ಮಿಲ್ಕ್




ಒಣ ತ್ವಚೆ ಇರುವವರ ಸಮಸ್ಯೆ ನಿವಾರಿಸಲೆಂದೇ ನಿವಿಯ ಇದೀಗ ನರಿಷಿಂಗ್ ಲೋಷನ್ ಅನ್ನು ಬಾಡಿ ಮಿಲ್ಕ್ ಹೆಸರಿನಲ್ಲಿ ಬಿಡುಗಡೆ ಮಾಡಿದೆ.

ಚಳಿಗಾಲದಲ್ಲಿ ತ್ವಚೆ ಒಣಗುವ ಸಾಧ್ಯತೆ ಇದ್ದು ಸದಾ ಕಾಲ ತೇವಾಂಶ ಕಾಪಾಡಿಕೊಂಡು ಚರ್ಮ ನಯವಾಗಿರಿಸಲು ಇದು ಸಹಕಾರಿ. ದೂರದ ಪ್ರಯಾಣ ಮಾಡುವಾಗಲಂತೂ ಇದನ್ನು ಬಳಸಲೇ ಬೇಕು ಎನ್ನುತ್ತದೆ ಕಂಪೆನಿ.

30 ಎಂಎಲ್ ಬೆಲೆ 40 ರೂಪಾಯಿ.

ಮಾಹಿತಿಗೆ: 9773699592

## ಡಿಸೈನರ್ ವಾಟರ್ ಹೀಟರ್

ಗೃಹೋಪಯೋಗಿ ಉತ್ಪನ್ನಗಳ ಉತ್ಪಾದನೆ ಮತ್ತು ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವ ಉಷಾ ಇಂಟರ್‌ನ್ಯಾಷನಲ್ ಲಿಮಿಟೆಡ್ ಇದೀಗ ವಿವಿಧ ಬಗೆಯ ತ್ವರಿತ ಮತ್ತು ನವೀನ ಮಾದರಿಯ ವಾಟರ್ ಸ್ಟೋರೇಜ್ ಹೀಟರ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಅಕ್ವಾ ಜೆನಿ ಮತ್ತು ಉಷಾ ಇನ್ನಾ ವಾಟರ್ ಎಂಬ ಎರಡು ವಿಭಿನ್ನ ಮಾದರಿಯ ಡಿಸೈನರ್ ವಾಟರ್ ಹೀಟರ್ ಅನ್ನು ಮನೆಯ ಅಂದಕ್ಕೆ ಒಪ್ಪುವಂತೆ ತಯಾರು ಮಾಡಲಾಗಿದೆ. ಹೊರ ಕವಚ ಹೊಂದಿರುವ ಹಾಗೂ ಅತ್ಯಂತ ಭಾರವಾದ ಬಹುಮಹಡಿ ಕಟ್ಟಡಗಳಲ್ಲಿ ಸುಲಭವಾಗಿ ಅಳವಡಿಸುವಂತೆ ಇದನ್ನು ತಯಾರು ಮಾಡಲಾಗಿದೆ. ಇದು 25 ಲೀಟರ್ ಗಳ ಸಾಮರ್ಥ್ಯ ನಿಭಾಯಿಸುತ್ತದೆ ಎನ್ನುತ್ತದೆ ಕಂಪೆನಿ.




ಬೆಲೆ ಕ್ರಮವಾಗಿ 4090 ಮತ್ತು 7500 ರೂಪಾಯಿ.

ವಿವರಕ್ಕೆ: 080–25533822, 41224410, 25270544